ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821–2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2023–24/CYS- 126  ದಿನಾಂಕ: 08 JAN 2024

## –: ಸಭೆಯ ನಡಾವಳಿಗಳು :–

ದಿನಾಂಕ:–12.12.2023 ರಂದು ಗುಂಡ್ಲುಪೇಟೆ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ ಕೊಡಗು ವೃತ್ತ ಮೈಸೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:–**

1. ಶ್ರೀ ಕೆ.ಸೋಮಶೇಖರ್ .: ಅಧೀಕ್ಷಕ ಇಂಜಿನಿಯರ್(ವಿ), ಚಾ.ನಗರ ಕೊಡಗು ವೃತ್ತ ಮೈಸೂರು.
2. ಶ್ರೀ ಕೆ.ಎಂ ಸಿದ್ದಲ್ಲಿಂಗಪ್ಪ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗುಂಡ್ಲುಪೇಟೆ ಉಪವಿಭಾಗ.
3. ಶ್ರೀ ಜಿ.ಮಹೇಶ್ : ಸಹಾಯಕ ಇಂಜಿನಿಯರ್(ವಿ), ಗುಂಡ್ಲುಪೇಟೆ ಪಟ್ಟಣ ಶಾಖೆ.
4. ಶ್ರೀ ಚಾಕಲಿ ಕೇಶಣ್ಣ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಹಂಗಳ ಶಾಖೆ.
5. ಶ್ರೀ ನವೀನ್ ಜಿ.ಕೆ : ಕಿರಿಯ ಇಂಜಿನಿಯರ್(ವಿ), ತೆರಕಣಾಂಬಿ ಶಾಖೆ.
6. ಶ್ರೀ ಮಯೂರ.ವಿ : ಕಿರಿಯ ಇಂಜಿನಿಯರ್(ವಿ), ಬೊಮ್ಮಲಾಪುರ ಶಾಖೆ.
7. ಶ್ರೀ ಪ್ರಕಾಶ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಮಾಡ್ರಹಳ್ಳಿ ಶಾಖೆ.
8. ಶ್ರೀ ನಾಗೇಂದ್ರ.ಆರ್ : ಪ್ರಭಾರ ಹಿರಿಯ ಸಹಾಯಕ ಕಂದಾಯ ಶಾಖೆ.

ಅದೀಕ್ಷಕಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನಸಂಪರ್ಕ ಸಭೆ ಕರೆದು ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆಧ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಗುಂಡ್ಲುಪೇಟೆ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ. ಕೆಳಗಿನಂತಿರುತ್ತವೆ

| ಕ್ರ. ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ತೆಗೆದುಕೊಂಡ ಕ್ರಮ |
|---|---|---|---|
| 1 | ಅಬ್ರಹಾಂ ಗುಂಡ್ಲುಪೇಟೆ | * ಗ್ರಾಹಕರು ತಮ್ಮ ಸ್ಥಾವರದ ಸಂಖ್ಯೆ ಉ1ಐ20088 ರ ಡಿಸೆಂಬರ್–2021 ರಿಂದ ಡಿಸೆಂಬರ್–2023 ರವರೆಗೆ ಸ್ಟೇಟ್‌ಮೆಂಟ್ ನೀಡಬೇಕೆಂದು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಹಿರಿಯ ಸಹಾಯಕರಿಗೆ G1L20088 ರ ಡಿಸೆಂಬರ್–2021 ರಿಂದ ಡಿಸೆಂಬರ್–2023 ರ ವರೆಗೆ ಸ್ಟೇಟ್‌ಮೆಂಟ್ ನೀಡಲು ಸೂಚಿಸಲಾಯಿತು. |
| 2 | ಸಂಪತ್ತು. ಎಂ ಕುಂದಕೆರೆ | * ಸದರಿ ಗ್ರಾಹಕರು ಗೃಹ ಜ್ಯೋತಿ ಯೋಜನೆಯಡಿ ಸರಾಸರಿ ಯೂನಿಟ್ ನಿಗದಿ ಮಾಡುವಾಗ ಈ ಹಿಂದೆ 11 ಕೆ.ವಿ ರೂರಲ್ ಫೀಡರ್ ಮೂಲಕ ವಿದ್ಯುತ್ ಸರಬರಾಜು ನೀಡುತ್ತಿದ್ದ ಸಮಯದಲ್ಲಿ ಬಳಸಿದ ಯೂನಿಟ್ ಆಧಾರವನ್ನು ಪರಿಗಣಿಸದೇ 2019, 2020, 2021 ರ ಕೋರೋನಾ ಸಮಯದಲ್ಲಿ ಬಳಸಿದ ಯೂನಿಟ್‌ಗಳ ಸರಾಸರಿಯನ್ನು ಪರಿಗಣಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ಗ್ರಾಹಕರ ಕೋರಿಕೆಯನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ತಿಳಿಸಲಾಯಿತು. |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾಮರಾಜನಗರ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗುಂಡ್ಲುಪೇಟೆ ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಪರಿಹಾರಕ್ಕೆ ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.